ಇಡುಕಿರಿಯುವ ಫ್ಯಾಂಟಸಿ ಕೆಲವು ತಲೆಮಾರುಗಳನ್ನು ಸೆಳೆದುಹಾಕಿದ ಮೇಲೆ ಇಂತಹುದೊಂದು ಜನಪ್ರಿಯ ಚಿತ್ರದ ಸೂತ್ರ ಫಲ ಕೊಡತೊಡಗಿದೆ. ದೊಡ್ಡ ಬಜೆಟ್‌ನ 'ಬಾಹುಬಲಿ' ರೂಪುಗೊಳ್ಳುವ ಮುನ್ನ 'ಮಗಧೀರ' ತೆಲುಗು ಚಿತ್ರವನ್ನು ರಾಜಮೌಳಿ ಪೈಲಟ್ ಪ್ರಾಜೆಕ್ಟ್ ಎಂಬಂತೆ ಮಾಡಿ ಮುಗಿಸಿದ್ದವರು. 'ಆರ್‌ಆರ್‌ಆರ್'ನಲ್ಲಿ ಅವರು ರಾಮ–ಭೀಮನನ್ನು ಕೂಡ ಫ್ಯಾಂಟಸಿಯ ಪರಿಕಲ್ಪನೆಯಲ್ಲಿ ಅದ್ದಿ ತೆಗೆದು ನಿಲ್ಲಿಸಿದ್ದರು. ಭೀಮನ ಪಾತ್ರಪೋಷಣೆಯ ದೊಡ್ಡ ಕಥನಾವಕಾಶಕ್ಕೆ ಅವರು ಬೆನ್ನುಮಾಡಿದ್ದರಾದರೂ, ಅವನ ಹೆಗಲ ಮೇಲೆ ರಾಮನನ್ನು ಕೂರಿಸಿ ಅವರು ಹೊಸಕಾಲದ ರಾಜಕೀಯ ಧೋರಣೆಯೊಂದರ ದರ್ಶನವನ್ನೂ ಮಾಡಿಸಿದ್ದರು.

ತಮಿಳಿನ ನಿರ್ದೇಶಕ ಶಂಕರ್ ಕೂಡ 'ಶಿವಾಜಿ', 'ರೋಬೊ' ಸಿನಿಮಾಗಳಲ್ಲಿ ಸೂಪರ್‌ಸ್ಟಾರ್ ರಜನೀಕಾಂತ್ ಇಮೇಜನ್ನು ಇಟ್ಟುಕೊಂಡೂ ಫ್ಯಾಂಟಸಿ ಕಥನವನ್ನು ಕೊಟ್ಟು ದೊಡ್ಡ ಮಟ್ಟದಲ್ಲಿ ಗೆದ್ದವರೇ. ಆದರೀಗ ರಜನೀಕಾಂತ್ ಅವರಿಂದ ಪ್ರಭಾಸ್, ಯಶ್ ಅಥವಾ ಅಲ್ಲು ಅರ್ಜುನ್‌ಗೆ ಸಾಧ್ಯವಿರುವ ದೈಹಿಕವಾಗಿ ಹೈರಾಣು ಮಾಡುವ ಕೆಲಸಗಳನ್ನು ಮಾಡಿಸಲಾಗದು. ವಿಕ್ರಮ್ ಕೂಡ ಮೊದಲಿನ ವರ್ಚಸ್ಸನ್ನು ಕಳೆದುಕೊಂಡಿದ್ದಾರೆ. ತಮಿಳಿನ ತಲಪತಿ ವಿಜಯ್ ಅವರಿಗೂ ದೊಡ್ಡದೊಂದು ಮಾರ್ಕೆಟ್ ಇದ್ದು, ಅವರು ಲೋಕೇಶ್ ಕನಕರಾಜ್ ತರಹದ ನಿರ್ದೇಶಕರ ನಿಕಷಕ್ಕೆ ಒಡ್ಡಿಕೊಂಡಿದ್ದಾರೆ. ಅದು ಬೇರೆಯದೇ ಬಗೆಯ ಸೂತ್ರವಾಗಿದ್ದು, ಕಮಲ ಹಾಸನ್ ಕೂಡ ಅದರೊಳಗೆ ಹೋಗಿ, 'ವಿಕ್ರಂ' ಆಗಿ ಬಂದದ್ದನ್ನು ಕಂಡಿದ್ದೇವೆ.

ಈಗ ಗೆದ್ದು ಬೀಗುತ್ತಿರುವ 'ಪುಷ್ಪ' ಸಿನಿಮಾದ ಬರವಣಿಗೆಯನ್ನು ಗಮನಿಸೋಣ. 'ಪುಷ್ಪ–ದಿ ರೈಸ್'ನಲ್ಲಿ ಮರ ಕಡಿಯುವ ಕೂಲಿಯವನೊಬ್ಬ ರಕ್ತಚಂದನ ಅಕ್ರಮ ಉದ್ಯಮದ ಅಧಿಪತಿಯಾಗಿ ನಿಲ್ಲುವ ಸೂಚನೆಯನ್ನು ನಿರ್ದೇಶಕ ಸುಕುಮಾರ್ ಕೊಟ್ಟು, ಮುಗಿಸುತ್ತಾರೆ. ಕೊನೆಯಲ್ಲಿ ಐಪಿಎಸ್ ಅಧಿಕಾರಿಯೊಬ್ಬರನ್ನು ತಂದು ಈ ಪುಷ್ಪರಾಜ್ ಎದುರು ನಿಲ್ಲಿಸುತ್ತಾರೆ. ಇಬ್ಬರ ಬಟ್ಟೆ ಬಿಚ್ಚಿಸಿ, ಬೆಟ್ಟದ ಮೇಲೆ ತೊಡೆ ತಟ್ಟುವಂತೆ ಮಾಡುತ್ತಾರೆ. ಐಪಿಎಸ್ ಅಧಿಕಾರಿಯ ಹೆಸರು ಭವರ್ ಸಿಂಗ್ ಶೆಖಾವತ್; ಉತ್ತರ ಭಾರತದವರು. ನಾಯಕ ಪುಷ್ಪರಾಜ್; ತೆಲುಗು ಬಿಡ್ಡ. ದಕ್ಷಿಣ ಭಾರತದ ಸಿನಿಮಾ ಹಾಗೂ ಹಿಂದಿ ಚಿತ್ರರಂಗ ಎರಡೂ ಇವತ್ತು ಎದುರುಬದಿರಾಗಿ ತೊಡೆ ತಟ್ಟಿದರೆ ಏನಾಗಬಹುದು ಎನ್ನುವುದರ ಸಂಕೇತವಾಗಿಯೂ ಈ ಎರಡು ಪಾತ್ರಗಳನ್ನು ನಾವು ಸಮೀಕರಿಸಿ ನೋಡಬಹುದು.

ಹಿಂದಿ ಸಿನಿಮಾ ನಿರ್ಮಾಣ–ನಿರ್ದೇಶನದಲ್ಲಿ ಹೆಸರು ಮಾಡಿದ ಕರಣ್ ಜೋಹರ್ 'ಬಾಹುಬಲಿ'ಯ ಹಿಂದಿ ಹಕ್ಕುಗಳಿಂದ ಪಡೆದ ಹಣ ಬಹುಶಃ ನಿರ್ಮಾಪಕರಾಗಿ ಅಷ್ಟೂ ಸಿನಿಮಾಗಳ ಗಳಿಕೆ ಅವರಿಗೆ ದಕ್ಕಿಸಿಕೊಟ್ಟಿರಲಾರದು. ಅದರ ನಂತರ ಅವರ ಅರಳುಗಣ್ಣು ದಕ್ಷಿಣ ಭಾರತದ ಫ್ಯಾಂಟಸಿ ಸಿನಿಮಾಗಳಿಂದ ತೆಗೆಯಲೇ ಇಲ್ಲ.

'ಪುಷ್ಪ' ಕೂಡ ಹಲವು ಭಾಷೆಗಳ ಪ್ರೇಕ್ಷಕರನ್ನು ಹಿಡಿದೆಳೆದ ಸಿನಿಮಾ. ಅದರಲ್ಲಿ ಕಳ್ಳ–ಪೊಲೀಸ್ ಆಟವೊಂದು ಇದೆ. 'ಪುಷ್ಪಾ–ದಿ ರೂಲ್'ನಲ್ಲಿ ಅವನು ಉದಯೋನ್ಮುಖ ಮರಗಳ್ಳ ಅಲ್ಲ; ನುರಿತ ವ್ಯವಹಾರ ಚತುರ. ರಾಜಕೀಯ ಮೊಗಸಾಲೆಯಲ್ಲಿ ಕಾಲಿಡುವ ಅವನು, ತನ್ನೊಡನೆ ಫೋಟೊ ತೆಗೆಸಿಕೊಳ್ಳಲು ಮುಖ್ಯಮಂತ್ರಿ ನಿರಾಕರಿಸಿದ್ದನ್ನು ಆತ್ಮಾಭಿಮಾನಕ್ಕೆ ಆದ ಧಕ್ಕೆ ಎಂದೇ ಭಾವಿಸುತ್ತಾನೆ. ಮರಗಳ್ಳನಿಗೆ ಎಂತಹ ಆತ್ಮಾಭಿಮಾನ ಎಂದು ನಾವು ಕೇಳಿಕೊಳ್ಳಬಹುದು. ಅವನನ್ನೂ ನಿರ್ದೇಶಕರು ಕುಟುಂಬಸ್ಥನನ್ನಾಗಿಸುತ್ತಾರೆ. ಹೆಂಡತಿಯೊಡನೆ ಸಮರಸವೇ ಜೀವನ ಎಂದು ಅವನು ಬದುಕುವಂತೆ ಮಾಡುತ್ತಾರೆ. ಅಣ್ಣನ ಮಗಳು ಅಪಹರಣಕ್ಕೆ ಒಳಗಾದಾಗ, ಜೀವ ಪಣಕ್ಕಿಟ್ಟು ಅವಳನ್ನು ಬಿಡಿಸಿ ತರುವ ಸಾಹಸವೀರನನ್ನಾಗಿಸುತ್ತಾರೆ. ಹೆಣ್ಣುಮಗುವಾಗಲಿ ಎಂಬ ಹರಕೆ ಹೊತ್ತು ದೇವಿಜಾತ್ರೆಯಲ್ಲಿ ಹೆಣ್ಣು ವೇಷವನ್ನೂ ತೊಡಬಲ್ಲ ತಾತ್ಕಾಲಿಕ 'ಫೆಮಿನಿಸ್ಟ್' ಆಗಿಯೂ ಅವನನ್ನು ಪಡಿಮೂಡಿಸುತ್ತಾರೆ.

ಹೀಗೆ ಫ್ಲವರ್ರು, ಫಯರ್ರು, ವೈಲ್ಡ್‌ಫಯರ್ರು ಎಲ್ಲಾ ಆಗಿಯೂ ಪುಷ್ಪಾ ದೊಡ್ಡ ಮರಗಳ್ಳ. ಅವನ ಪುರುಷಾಹಂಕಾರ, ಹೊಡೆದಾಡುವ ಶೈಲಿ, ನಡೆದಾಡುವ ವಿಲಕ್ಷಣ ಭಂಗಿ, ಮೇಲೇರಿದ ಒಂದು ಭುಜದ ಊನ... ಇವೆಲ್ಲವೂ ಹೊಸಕಾಲದ ಫ್ಯಾಂಟಸಿ ನಾಯಕನ ಭಿನ್ನ ದರ್ಶನಕ್ಕೆ ವರ್ಕ್‌ಔಟ್ ಆಗಿರುವ ಅಂಶಗಳು.

ಒಟಿಟಿಯಲ್ಲಿ ಜಗತ್ತಿನ ಅಗಣಿತ ಪ್ರೇಕ್ಷಕರು ಕಣ್ಣು ಕೀಲಿಸಿಕೊಂಡು ನೋಡುವಂತೆ ಮಾಡಿದ ವೆಬ್‌ಸರಣಿ 'ಮನಿ ಹೀಸ್ಟ್'. ದರೋಡೆ ಸಂಚುಕೋರನೊಬ್ಬನಿಗೆ ಅದರಲ್ಲಿ ಪ್ರೊಫೆಸರ್ ಎಂಬ ಹೆಸರಿಡಲಾಗಿದೆ. ಎಂತಹ ಮನಮಿಡಿಯಬೇಕಾದ ಸನ್ನಿವೇಶದಲ್ಲೂ ಬ್ರೇನ್‌ಗೇಮ್ ಆಡುತ್ತಾ ಇರುವ ಆ ಸರಣಿಯ ಪ್ರೊಫೆಸರ್ ಪಾತ್ರ ಹೊಸಕಾಲದ ಎಷ್ಟೋ ಮನಸ್ಸುಗಳನ್ನು ಪ್ರೇರೇಪಿಸಿರಲಿಕ್ಕೂ ಸಾಕು.



ಅಂತಹ ಮನಸ್ಸುಗಳೇ ಪುಷ್ಪಾ ತರಹದ ನಾಯಕರನ್ನು ಇವತ್ತು ಕೊಂಡಾಡುತ್ತಿವೆ. ಸಿನಿಮಾ ಗೆಲ್ಲಬೇಕೆಂದರೆ, ಇವೆಲ್ಲ ಸೂತ್ರಗಳನ್ನು ವರ್ಕ್‌ಔಟ್ ಮಾಡಬೇಕು ಎನ್ನುವ ಶಾಣ್ಯಾತನ ಸುಕುಮಾರ್ ಅವರಿಗೂ ಇಲ್ಲದೇ ಏನೂ ಇಲ್ಲ.

ಒಂದು ಕುಣಿತದ ಗೀತೆಗೆ ಶ್ರೀಲೀಲಾ ತರಹದ ಮುಖ್ಯವಾಹಿನಿ ನಟಿಯನ್ನು ಒಪ್ಪಿಸಿ ತಂದಿರುವ ಸುಕುಮಾರ್ ಸೃಷ್ಟಿಸುವ ಸಿನಿಮಾ ಜಗತ್ತನ್ನು ರಾಜಮೌಳಿ ಕೂಡ ಪದೇಪದೇ ಕೊಂಡಾಡುತ್ತಾರೆ. ತಮ್ಮನ್ನು ಮೆಚ್ಚುವ ಆ ಹಿರಿಯ ನಿರ್ದೇಶಕರ ಫ್ಯಾಂಟಸಿ ಲೋಕವನ್ನು ಸುಕುಮಾರ್ ಕೂಡ ಹಾಡಿ ಹೊಗಳುತ್ತಾರೆ. ಇವರಿಬ್ಬರನ್ನೂ ಕರಣ್ ಜೋಹರ್ ದೊಡ್ಡ ಫ್ರೇಮಿನ ಕನ್ನಡಕದೊಳಗಿನ ಕಣ್ಣುಗಳು ರೆಪ್ಪೆ ಮಿಟುಕಿಸದೆ ನೋಡುತ್ತವೆ. ಅಂದಹಾಗೆ, ಯಶ್ ಬೆಳೆಸಿರುವ ಹೊಸ ಸ್ವರೂಪದ ಗಡ್ಡ 'ಟಾಕ್ಸಿಕ್' ಸಿನಿಮಾದ ಕ್ಯಾಮೆರಾ ಬೆಳಕಿಗೆ ಇದೀಗ ಒಡ್ಡಿಕೊಳ್ಳುತ್ತಿದೆ. ಆಹಾ ಪುರುಷಾಹಂಕಾರಂ!

ಪ್ರತಿಕ್ರಿಯಿಸಿ: feedback@sudha.co.in